ನೋಂದಣಿ ಸಂಖ್ಯೆ Registration No:											

A3 – 2024

ವಿಷಯ ಸಂಕೇತ Subject Code	30

30

ಲೆಕ್ಕಶಾಸ್ತ್ರ / ACCOUNTANCY

(Kannada and English Versions)

ಸಮಯ: 3 ಗಂಟೆ 15 ನಿಮಿಷಗಳು (ಒಟ್ಟು ಪ್ರಶ್ನೆಗಳ ಸಂಖ್ಯೆ : 32) ಗರಿಷ್ಠ ಅಂಕಗಳು: 80

Time : 3 Hours 15 Minutes] [Total No. of Questions : 32] [Max. Marks : 80

(Kannada Version)

ಸೂಚನೆಗಳು :

1. ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ಭಾಗಗಳನ್ನು ಹೊಂದಿದೆ. **ಭಾಗ -'ಎ' - I, II, III** ಮತ್ತು **IV** ವಿಭಾಗಗಳನ್ನು ಒಳಗೊಂಡಿದೆ.
2. ಅಗತ್ಯವಿರುವ ಕಡೆ ಲೆಕ್ಕದ ಟಿಪ್ಪಣಿಗಳನ್ನು ಬರೆಯಿರಿ.
3. ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಓದಿಕೊಳ್ಳಲು 15 ನಿಮಿಷ ಅವಧಿಯನ್ನು ಹೆಚ್ಚುವರಿಯಾಗಿ ನೀಡಿದೆ.
4. ಹಾಳೆಯ ಬಲಬದಿಯಲ್ಲಿ ಬರೆದಿರುವ ಸಂಖ್ಯೆಗಳು ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಭಾಗ -'ಎ' ಯಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಭಾಗ - ಎ

I. ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : (5 × 1 = 5)

1) ಪಾಲುದಾರರ ನಡುವಿನ ಕರಾರು ಒಪ್ಪಂದವು ಈ ರೀತಿಯಾಗಿದೆ.

a) ಮೌಖಿಕ b) ಬರವಣಿಗೆ

c) ಮೌಖಿಕ / ಬರವಣಿಗೆ d) ಯಾವುದೂ ಇಲ್ಲ

2) ಆಶಾ, ಉಷಾ ಮತ್ತು ದಿಶಾ ಪಾಲುದಾರರು 5:3:2 ರ ಪ್ರಮಾಣದಂತೆ ಲಾಭವನ್ನು ಹಂಚಿಕೊಳ್ಳುತ್ತಾರೆ. ದಿಶಾ ನಿವೃತ್ತಿಯಾದರೆ ಆಶಾ ಮತ್ತು ಉಷಾರ ನಡುವಿನ ಹೊಸ ಲಾಭದ ಅನುಪಾತವು ______ ಆಗಿರುತ್ತದೆ.

a) 3:2 b) 5:3

c) 5:2 d) 2:3

3) ಯಾವಾಗ ಶೇರುಗಳನ್ನು ಮುಟ್ಟುಗೋಲು ಹಾಕಬಹುದು?

a) ಕರೆಗಳ ಹಣವನ್ನು ಪಾವತಿಸದೆ ಹೋದಾಗ. b) ಸಭೆಗಳಿಗೆ ಹಾಜರಾಗಲು ತಪ್ಪಿದಾಗ.

c) ಬ್ಯಾಂಕಿನ ಸಾಲ ಮರು ಪಾವತಿಸಲು ತಪ್ಪಿದಾಗ. d) ಶೇರುಗಳನ್ನು ಆಧಾರವಾಗಿ ಅಡವು ಇಟ್ಟಾಗ.

4) ಸ್ಥಿರಾಸ್ತಿಗಳು ಯಾವುದನ್ನು ಒಳಗೊಂಡಿಲ್ಲ

a) ಯಂತ್ರ b) ಕಟ್ಟಡ c) ಕೀರ್ತಿಮೌಲ್ಯ d) ದಾಸ್ತಾನು

5) ಚಾಲ್ತಿ ಆಸ್ತಿಗಳ ಮೌಲ್ಯ ಹೆಚ್ಚಳ ಮತ್ತು ಇಳಿಕೆಯನ್ನು ಈ ಚಟುವಟಿಕೆಯೆಂದು ಪರಿಗಣಿಸಲಾಗುವುದು.

a) ಕಾರ್ಯಾತ್ಮಕ ಚಟುವಟಿಕೆಗಳು b) ಹೂಡಿಕೆ ಚಟುವಟಿಕೆಗಳು

c) ಹಣಕಾಸಿನ ಚಟುವಟಿಕೆಗಳು d) ಕಾರ್ಯೇತರ ಚಟುವಟಿಕೆಗಳು

II. ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಖಾಲಿ ಬಿಟ್ಟ ಸ್ಥಳವನ್ನು ಭರ್ತಿಮಾಡಿ: **(5 × 1 = 5)**

(ವಿಲೇವಾರಿ ಖಾತೆ, ಬಂಡವಾಳ, ಸೋಡಿ, ದ್ರವತ್ವದ, ಸದೃಢತೆಯ, ಹಣಕಾಸಿನ)

6) ಹೊಸ ಪಾಲುದಾರನ ಪ್ರವೇಶ ಸಮಯದಲ್ಲಿ ಆಢಾವೆ ಪತ್ರಿಕೆಯ ಹೊಣೆಗಾರಿಕೆಗಳ ವಿಭಾಗದಲ್ಲಿ ಬರುವ ಲಾಭ ನಷ್ಟ ಖಾತೆಯ ಶಿಲ್ಕನ್ನು _______ ಖಾತೆಗೆ ಜಮಾ ಮಾಡುವಿರಿ.

7) ಪಾಲುಗಾರಿಕಾ ಸಂಸ್ಥೆಯ ವಿಸರ್ಜನೆ ಸಂದರ್ಭದಲ್ಲಿ, ಪಾಲುದಾರನ ಸಾಲವನ್ನು ______ ಖಾತೆಯಲ್ಲಿ ದಾಖಲಿಸುವುದಿಲ್ಲ.

8) ಸಾಲಪತ್ರಗಳನ್ನು _______ ಯಲ್ಲಿ ವಿಮೋಚನೆಗೊಳಿಸಲಾಗುವುದಿಲ್ಲ.

9) ______ ತಃಖ್ತೆಗಳು ಮೂಲಭೂತ ಮತ್ತು ಔಪಚಾರಿಕ ವಾರ್ಷಿಕ ವರದಿಗಳಾಗಿವೆ.

10) _______ ಅನುಪಾತವನ್ನು ಲೆಕ್ಕಹಾಕುವುದರ ಮೂಲಕ ವ್ಯವಹಾರದ ಅಲ್ಪಾವಧಿಯ ಸಾಮರ್ಥ್ಯವನ್ನು ಅಳತೆಮಾಡಲಾಗುವುದು.

III. ಹೊಂದಿಸಿ ಬರೆಯಿರಿ: **(5 × 1 = 5)**

11)

ಎ	ಬಿ
(a) ಬದಲಾಗುವ ಬಂಡವಾಳ ವಿಧಾನ	(i) ಕಾನೂನು ಬದ್ಧ ಪ್ರತಿನಿಧಿಗಳು
(b) ವಾರಸುದಾರರು	(ii) ತುಲನಾತ್ಮಕ ತಃಖ್ತೆ
(c) ವಿಲೇವಾರಿ ವೆಚ್ಚ	(iii) ಕೂಡು ಬಂಡವಾಳ ಸಂಸ್ಥೆ
(d) ಕೃತಕ ವ್ಯಕ್ತಿ	(iv) ಪಾಲುಗಾರಿಕಾ ಸಂಸ್ಥೆ ವಿಸರ್ಜನೆ
(e) ಸಮತಲ ವಿಶ್ಲೇಷಣೆ	(v) ಬಂಡವಾಳ ಖಾತೆಯ ಶಿಲ್ಕು ಬದಲಾವಣೆ
	(vi) ಸಾಮಾನ್ಯ ಗಾತ್ರದ ತಃಖ್ತೆ

IV. ಕೆಳಗಿನ ಪ್ರಶ್ನೆಗಳಿಗೆ **ಒಂದು** ಪದ ಅಥವಾ **ಒಂದು** ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

12) ಹೊಸ ಪಾಲುದಾರನ ಪ್ರವೇಶಾತಿಗೆ ಒಂದು ಕಾರಣವನ್ನು ತಿಳಿಸಿ.

13) ಸಾಲಪತ್ರಗಳನ್ನು ಶೇರುಗಳಾಗಿ ಪರಿವರ್ತಿಸಬಹುದೆ? (ಸರಿ/ತಪ್ಪು ತಿಳಿಸಿ)

14) ಹಣಕಾಸಿನ ತಃಖ್ತೆಗಳ ವಿಶ್ಲೇಷಣೆಯನ್ನು ಬಳಸಿಕೊಳ್ಳುವ ಒಬ್ಬ ಬಳಕೆದಾರನನ್ನು ಹೆಸರಿಸಿ.

15) **EPS** – ಅನ್ನು ವಿಸ್ತರಿಸಿ.

16) ನಗದು ಹರಿವುಗಳ ಅರ್ಥನೀಡಿ.

ಭಾಗ – ಬಿ

V. ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಎರಡು** ಅಂಕಗಳು: **(3 × 2 = 6)**

17) ಪಾಲುಗಾರಿಕಾ ಕರಾರು ಪತ್ರ ಎಂದರೇನು?

18) ಪಾಲುದಾರನ ನಿವೃತ್ತಿ ಸಂದರ್ಭದಲ್ಲಿ ಪುನರ್‌ಮೌಲ್ಯಮಾಪನ ಖಾತೆಯನ್ನು ಮುಕ್ತಾಯಗೊಳಿಸಿದಾಗ ಲಾಭವುಂಟಾಗಿದ್ದರೆ ರೋಜನ್ನುದಾಖಲಿಸಿರಿ.

19) ಶೇರುಗಳ ನೀಡಿಕೆಯ ಯಾವುದಾದರೂ ಎರಡು ವಿಧಗಳನ್ನು ಹೆಸರಿಸಿ.

20) ''ಶೇರುದಾರರ ನಿಧಿಗಳು'' ಶೀರ್ಷಿಕೆ ಅಡಿಯಲ್ಲಿ ಬರುವ ಎರಡು ಉಪ ವಿಭಾಗಗಳನ್ನು ಸೂಚಿಸಿ.

21) ಹೂಡಿಕೆ ಚಟುವಟಿಕೆಗಳಿಗೆ ಎರಡು ಉದಾಹರಣೆಗಳನ್ನು ಬರೆಯಿರಿ.

ಭಾಗ – ಸಿ

VI. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಆರು** ಅಂಕಗಳು : **(3 × 6 = 18)**

22) ಸೂರಜ್ ಒಂದು ಸಂಸ್ಥೆಯ ಪಾಲುದಾರನಾಗಿದ್ದು, ತನ್ನ ಸ್ವಂತಕ್ಕೆ ಈ ಕೆಳಗಿನಂತೆ ಹಣವನ್ನು ದಿನಾಂಕ **31-12-2023** ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ಬಳಸಿದ್ದಾನೆ.

ರೂ.**6,000** ದಿನಾಂಕ **31-03-2023**

ರೂ.**10,000** ದಿನಾಂಕ **01-07-2023**

ರೂ.**4,000** ದಿನಾಂಕ **31-10-2023**

ರೂ.**1,000** ದಿನಾಂಕ **31-12-2023**

ಗುಣಲಬ್ಧ ಪದ್ಧತಿಯ **(product method)** ಪ್ರಕಾರ ಸ್ವಂತಕ್ಕೆ ಹಿಂಪಡೆತದ ಮೇಲೆ ಶೇಕಡಾ **6** ರಂತೆ ಬಡ್ಡಿಯನ್ನು ಕಂಡುಹಿಡಿಯಿರಿ.

23) ಅಮರ್, ಅಕ್ಬರ್ ಮತ್ತು ಅಂತೋಣಿ ಒಂದು ಪಾಲುದಾರಿಕಾ ಸಂಸ್ಥೆಯ ಪಾಲುದಾರರಾಗಿದ್ದು, ಕ್ರಮವಾಗಿ **4:3:2** ರ ಪ್ರಮಾಣದಲ್ಲಿ ಲಾಭ-ನಷ್ಟ ಹಂಚಿಕೊಳ್ಳುತ್ತಿದ್ದು, ಅಮರ್ ಪಾಲುದಾರಿಕಾ ಸಂಸ್ಥೆಯಿಂದ ನಿವೃತ್ತಿ ಹೊಂದುತ್ತಾರೆ. ಅಮರ್ ರವರ ನಿವೃತ್ತಿಯ ನಂತರ ಅಕ್ಬರ್ ಮತ್ತು ಅಂತೋಣಿ ಭವಿಷ್ಯದಲ್ಲಿ ಪಾಲುದಾರಿಕಾ ಸಂಸ್ಥೆಯ ಲಾಭವನ್ನು **5:3**ರ ಪ್ರಮಾಣದಲ್ಲಿ ಹಂಚಿಕೊಳ್ಳಲು ಒಪ್ಪಿರುತ್ತಾರೆ.

ಅಕ್ಬರ್ ಮತ್ತು ಅಂತೋಣಿರವರ ಗಳಿಕೆ ಪ್ರಮಾಣವನ್ನು ಕಂಡುಹಿಡಿಯಿರಿ.

24) ಆಕಾಶ್, ಸುರೇಶ್ ಮತ್ತು ರಮೇಶ್ ಪಾಲುದಾರರಾಗಿದ್ದು, ಅವರುಗಳ ಲಾಭ-ನಷ್ಟ ಪ್ರಮಾಣ 3:2:1 ಇರುತ್ತದೆ. ದಿನಾಂಕ 01-01-2023 ರಂದು ಅವರು ಅನುಕ್ರಮವಾಗಿ ₹ 45,000. ₹ 30,000 ಮತ್ತು ₹ 20,000 ಬಂಡವಾಳವನ್ನು ಹೊಂದಿರುತ್ತಾರೆ. ದಿನಾಂಕ 30-09-2023 ರಂದು ಸುರೇಶ್ ನಿಧನ ಹೊಂದಿದ್ದು, ಪಾಲುದಾರಿಕೆ ಕರಾರು ಒಪ್ಪಂದ ಈ ಕೆಳಗಿನ ಅಂಶಗಳನ್ನು ಹೊಂದಿದೆ:

a) ಪಾಲುದಾರನ ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇಕಡಾ 10 ರಂತೆ.

b) ಸುರೇಶ್‌ನಿಗೆ ತಿಂಗಳ ಸಂಬಳ ₹ 1,000.

c) ಸುರೇಶ್‌ನ ಪಾಲಿನ ಕೀರ್ತಿಮೌಲ್ಯ (AS26 ರ ಪ್ರಕಾರ)

d) ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಮರಣ ಹೊಂದಿದ ದಿನಾಂಕದವರೆಗಿನ ಲಾಭದಲ್ಲಿನ ಪಾಲನ್ನು ನೀಡುವುದು.

e) ಸಂಸ್ಥೆಯ ಒಟ್ಟಾರೆ ಕೀರ್ತಿಮೌಲ್ಯ ₹ 27,000.

f) ವರ್ಷ – 2022 ರ ಸಂಸ್ಥೆಯ ಒಟ್ಟು ಲಾಭ ₹ 15,000.

ಸುರೇಶನ ವಾರಸುದಾರರಿಗೆ ನೀಡಬೇಕಾದ ಮೊತ್ತವನ್ನು ವಾರಸುದಾರರ ಖಾತೆಯನ್ನು ತಯಾರಿಸುವ ಮೂಲಕ ಧೃಡೀಕರಿಸಿ.

25) ಈ ಕೆಳಗಿನ ಮಾಹಿತಿಯಿಂದ ಪರಿಷ್ಕೃತ ಪರಿಚ್ಛೇದ III ರಂತೆ ಕಂಪನಿ ಕಾಯಿದೆ 2013 ರ ಪ್ರಕಾರ 31-03-2023 ರ ವರ್ಷಕ್ಕೆ ಕೊನೆಗೊಂಡಿರುವಂತೆ ಲಾಭ-ನಷ್ಟ ತಃಖ್ತೆಯನ್ನು ತಯಾರಿಸಿ.

ಕ್ರ.ಸಂ.	ವಿವರಗಳು	₹
1	ಕಾರ್ಯಾಚರಣೆಯಿಂದ ಬಂದ ಆದಾಯ	5,00,000
2	ಸರಕುಗಳ ಖರೀದಿ	3,00,000
3	ನೌಕರರ ಸಂಬಳ	40,000
4	ರಜೆ ನಗದೀಕರಣ	10,000
5	ಬಾಡಿಗೆ ಮತ್ತು ತೆರಿಗೆಗಳು	30,000
6	ಯಂತ್ರದ ರಿಪೇರಿಗಳು	20,000
7	ತೆರಿಗೆ	30%

26) ಈ ಕೆಳಗಿನ ವಿವರಗಳಿಂದ ಹಣಕಾಸಿನ ಚಟುವಟಿಕೆಗಳಿಂದಾಗುವ ನಗದು ಹರಿವುಗಳನ್ನು ಕಂಡುಹಿಡಿಯಿರಿ:

ವಿವರಗಳು	01-04-2022	31-03-2023
ಸಾಲಪತ್ರಗಳು	8,00,000	10,00,000
ಪ್ರಾಶಸ್ತ್ಯದ ಬಂಡವಾಳ	3,00,000	5,00,000

ಪ್ರಸ್ತುತ ವರ್ಷದಲ್ಲಿ, ಕಂಪನಿಯು ಸಾಲಪತ್ರಗಳನ್ನು ವಿಮೋಚನೆಗೊಳಿಸುವ ಮೊತ್ತ ₹ 1,00,000 ಆಗಿರುತ್ತದೆ.

ಭಾಗ - ಡಿ

VII. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 12 ಅಂಕಗಳು : **(3 × 12 = 36)**

27) ಸರಿತ ಹಾಗೂ ಸಂಗೀತ ಪಾಲುದಾರರಾಗಿದ್ದು, ಲಾಭ-ನಷ್ಟವನ್ನು **3:2** ರ ಪ್ರಮಾಣದಲ್ಲಿ ಹಂಚಿಕೊಳ್ಳುವರು. ದಿನಾಂಕ **31-03-2023** ರಂತೆ ಅವರ ಅಢಾವೆ ಪತ್ರಿಕೆ ಕೆಳಗಿನಂತಿದೆ.

ದಿನಾಂಕ **31-03-2023** ರ ಅಢಾವೆ ಪತ್ರಿಕೆ

ಹೊಣೆಗಾರಿಕೆಗಳು	₹	ಆಸ್ತಿಗಳು	₹
ಸಾಹುಕಾರರು	**1,00,000**	ನಗದು	**40,000**
ಕೊಡ ತಕ್ಕ ಹುಂಡಿಗಳು	**50,000**	ದಾಸ್ತಾನು	**50,000**
ಮೀಸಲು ನಿಧಿ	**50,000**	ಸಾಲಗಾರರು	**40,000**
ಬಂಡವಾಳ ಖಾತೆಗಳು:		ಪೀಠೋಪಕರಣ	**40,000**
ಸರಿತ – **1,20,000**		ಯಂತ್ರ	**80,000**
ಸಂಗೀತ – **80,000**	**2,00,000**	ಕಟ್ಟಡಗಳು	**1,00,000**
		ಹೂಡಿಕೆಗಳು	**40,000**
		ಲಾಭ-ನಷ್ಟ ಖಾತೆ	**10,000**
ಒಟ್ಟು	**4,00,000**	ಒಟ್ಟು	**4,00,000**

ದಿನಾಂಕ **01 – 04 – 2023** ರಂದು ಸವಿತರನ್ನು ಈ ಕೆಳಗಿನ ಕರಾರುಗಳ ಮೇಲೆ ಪಾಲುದಾರಿಕೆಗೆ ಪ್ರವೇಶ ನೀಡಲಾಯಿತು:

a) ಅವರು ¼ ರ ಭಾಗದ ಲಾಭಕ್ಕೆ ಬಂಡವಾಳ ₹ **60,000** ಮತ್ತು ಕೀರ್ತಿ ಮೌಲ್ಯಕ್ಕೆ ₹ **20,000** ತರಬೇಕು. **(AS-26 ರ ಪ್ರಕಾರ)**

b) ಕೀರ್ತಿ ಮೌಲ್ಯ ದ ಮೊತ್ತವನ್ನು ಹಳೆಯ ಪಾಲುದಾರರು ವಾಪಸ್ಸು ತೆಗೆದುಕೊಳ್ಳುತ್ತಾರೆ.

c) ಯಂತ್ರಗಳು ಹಾಗು ಪೀಠೋಪಕರಣದ ಮೇಲೆ ಶೇಕಡಾ **10** ರಷ್ಟು ಸವಕಳಿ ತೆಗೆಯಿರಿ.

d) ಸಂಶಯಾಸ್ಪದ ಸಾಲಕ್ಕಾಗಿ ಶೇಕಡ **5** ರಷ್ಟು ಮೀಸಲಿರಿಸಿ.

e) ಕಟ್ಟಡದ ಬೆಲೆಯನ್ನು ₹ **22,000** ರಷ್ಟು ಹೆಚ್ಚಿಸಿ.

f) ಕೊಡತಕ್ಕ ಸಂಬಳಕ್ಕಾಗಿ ₹ **2,000** ಒದಗಿಸಿ.

g) ಹೂಡಿಕೆಗಳ ಮರು ಮೌಲ್ಯವನ್ನು ₹ **50,000** ಎಂದು ನಿರ್ಧರಿಸಿರಿ.

ತಯಾರಿಸಿ : **1)** ಪುನರ್‌ಮೌಲ್ಯಮಾಪನ ಖಾತೆ **2)** ಪಾಲುದಾರರ ಬಂಡವಾಳ ಖಾತೆ **3)** ದಿನಾಂಕ **1 – 4 – 2023** ರ ಹೊಸ ಅಢಾವೆ ಪತ್ರಿಕೆ.

28) ಸಚಿನ್ ಮತ್ತು ರಾಹುಲ್ ರವರು ಪಾಲುದಾರರಾಗಿದ್ದು ಲಾಭ-ನಷ್ಟವನ್ನು ಅನುಕ್ರಮವಾಗಿ 3:2 ರ ಪ್ರಮಾಣದಲ್ಲಿ ಹಂಚಿಕೊಳ್ಳುವರು. ದಿನಾಂಕ 31-03-2023 ರಂದು ಅವರ ಅಢಾವೆ ಪತ್ರಿಕೆ ಕೆಳಗಿನಂತಿದೆ:

ದಿನಾಂಕ 31-03-2023 ರ ಅಢಾವೆ ಪತ್ರಿಕೆ

ಹೊಣೆಗಾರಿಕೆಗಳು	₹	ಆಸ್ತಿಗಳು	₹
ಸಾಹುಕಾರರು	10,000	ಬ್ಯಾಂಕಿನ ನಗದು	5,000
ಕೊಡತಕ್ಕ ಹುಂಡಿಗಳು	20,000	ಹೂಡಿಕೆಗಳು	10,000
ಸಚಿನ್‌ರ ಸಾಲ	10,000	ಬರತಕ್ಕ ಹುಂಡಿಗಳು	10,000
ಮೀಸಲು ನಿಧಿ	10,000	ಸಾಲಗಾರರು	25,000
ಬಂಡವಾಳ ಖಾತೆ :		ದಾಸ್ತಾನು	10,000
ಸಚಿನ್ – 30,000		ಯಂತ್ರಗಳು	10,000
ರಾಹುಲ್ – 20,000	50,000	ಪೀಠೋಪಕರಣ	10,000
		ಕಟ್ಟಡಗಳು	20,000
ಒಟ್ಟು	1,00,000	ಒಟ್ಟು	1,00,000

ಮೇಲಿನ ದಿನಾಂಕದಂದು ಪಾಲುದಾರಿಕಾ ಸಂಸ್ಥೆಯನ್ನು ವಿಸರ್ಜಿಸಲಾಯಿತು.

a) ಆಸ್ತಿಗಳನ್ನು ಕೆಳಕಂಡಂತೆ ವಿಲೇವಾರಿ ಮಾಡಲಾಯಿತು. ಬರತಕ್ಕ ಹುಂಡಿಗಳು ₹ 7,500; ಸಾಲಗಾರರು ಹಾಗೂ ದಾಸ್ತಾನು ಶೇಕಡಾ 10% ರಷ್ಟು ಕಡಿಮೆ ಮಾಡಲಾಗಿದೆ; ಯಂತ್ರಗಳು ಶೇಕಡಾ 5 ರಷ್ಟು ಹೆಚ್ಚಾಗಿವೆ; ಕಟ್ಟಡದ ಬೆಲೆ ₹ 15,000 ರಷ್ಟಾಗಿದೆ.

b) ಪೀಠೋಪಕರಣ ಹಾಗೂ ಹೂಡಿಕೆಗಳನ್ನು ಸಚಿನ್ ಮತ್ತು ರಾಹುಲ್ ತಲಾ ₹ 5,000 ಕ್ಕೆ ತೆಗೆದು ಕೊಂಡಿದ್ದಾರೆ.

c) ವಿಸರ್ಜನಾ ವೆಚ್ಚ ₹ 1,000 ಆಗಿರುತ್ತದೆ.

d) ಎಲ್ಲಾ ಹೊಣೆಗಾರಿಕೆಗಳು ಸಂಪೂರ್ಣವಾಗಿ ಪಾವತಿಸಿದೆ.

ತಯಾರಿಸಿ:

i) ವಿಲೇವಾರಿ ಖಾತೆ ii) ಪಾಲುದಾರರ ಬಂಡವಾಳ ಖಾತೆ iii) ಬ್ಯಾಂಕ್ ಖಾತೆ

29) ವಿಜಯಲಕ್ಷ್ಮಿ ಶುಗರ್ ಕಂ. ಲಿಮಿಟೆಡ್ ತಲಾ ₹ 10 ರ 10,000 ಪ್ರಾಶಸ್ತ್ಯ ಶೇರುಗಳನ್ನು ಪ್ರತಿಯೊಂದಕ್ಕೆ ₹ 2 ರ ಮೇಲ್ಗೊಡುಗೆಯೊಂದಿಗೆ (ಪ್ರೀಮಿಯಂ) ಬಿಡುಗಡೆ ಮಾಡಿತು.

ಮೊತ್ತಗಳನ್ನು ಈ ಕೆಳಗಿನಂತೆ ಪಾವತಿಸುವುದು.

₹ 2 ಅರ್ಜಿಯೊಂದಿಗೆ

₹ 6 ಹಂಚಿಕೆಯೊಂದಿಗೆ (ಪ್ರೀಮಿಯಂ ಸಹಿತ).

₹ 4 ಮೊದಲ ಹಾಗೂ ಅಂತಿಮ ಕರೆ.

ಎಲ್ಲಾ ಶೇರುಗಳಿಗೆ ವಂತಿಕೆ ಪಡೆಯಲಾಯಿತು, ಆದರೆ 500 ಪ್ರಾಶಸ್ತ್ಯ ಶೇರುಗಳ ಮೊದಲ ಹಾಗೂ ಅಂತಿಮ ಕರೆಯ ಹಣವನ್ನು ಹೊರತುಪಡಿಸಿ ಉಳಿದ ಎಲ್ಲಾ ಮೊತ್ತವನ್ನು ಕಂಪನಿಯು ಪಡೆದುಕೊಂಡಿತು. ನಿರ್ದೇಶಕರು ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ₹ 7 ರಂತೆ ಪೂರ್ಣ ಪಾವತಿಯಾದ ಶೇರುಗಳೆಂದು ಮರುಬಿಡುಗಡೆ ಮಾಡಲಾಯಿತು.

ಶೇರುಗಳ ಬಿಡುಗಡೆ, ಮುಟ್ಟುಗೋಲು ಹಾಗೂ ಮರುಬಿಡುಗಡೆಗೆ ಸಂಬಂಧಿಸಿದಂತೆ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

30) ರಿಲಾಯನ್ಸ್ ಕಂಪನಿ ಪುಸ್ತಕದಲ್ಲಿ , ಕೆಳಗಿನ ಸಂದರ್ಭಗಳಲ್ಲಿ ಸಾಲಪತ್ರಗಳ ನೀಡಿಕೆಗೆ ಸಂಬಂಧಿಸಿದ ರೋಜು ದಾಖಲೆಗಳನ್ನು ದಾಖಲಿಸಿ :

a) ತಲಾ ₹ 100ರ ಮುಖ ಬೆಲೆಯ ಶೇಕಡಾ 9 ರ ₹ 2,00,000ದ ಸಾಲಪತ್ರಗಳನ್ನು ಮುಖಬೆಲೆಯಲ್ಲಿ ನೀಡಿಕೆ ಮಾಡಿ, ಮುಖ ಬೆಲೆಯಲ್ಲಿಯೇ ವಿಮೋಚನೆಗೊಳಿಸುವುದು.

b) ತಲಾ ₹ 100ರ ಮುಖ ಬೆಲೆಯ ಶೇಕಡಾ 10 ರ ₹ 2,00,000 ದ ಸಾಲಪತ್ರಗಳನ್ನು ಶೇಕಡಾ 5 ರ ಪ್ರೀಮಿಯಂ ನಲ್ಲಿ ನೀಡಿಕೆಮಾಡಿ, ಮುಖ ಬೆಲೆಯಲ್ಲಿ ವಿಮೋಚನೆಗೊಳಿಸುವುದು.

c) ತಲಾ ₹ 100ರ ಮುಖ ಬೆಲೆಯ ಶೇಕಡಾ 12 ರ ₹ 2,00,000 ದ ಸಾಲಪತ್ರಗಳನ್ನು ಶೇಕಡಾ 5 ರ ಸೋಡಿ ಬೆಲೆಯಲ್ಲಿ ನೀಡಿಕೆಮಾಡಿ, ಮುಖಬೆಲೆಯಲ್ಲಿ ವಿಮೋಚನೆಗೊಳಿಸುವುದು.

d) ತಲಾ ₹ 100ರ ಮುಖ ಬೆಲೆಯ ಶೇಕಡಾ 8 ರ ₹ 2,00,000 ದ ಸಾಲಪತ್ರಗಳನ್ನು ಮುಖಬೆಲೆಯಲ್ಲಿ ನೀಡಿಕೆಮಾಡಿ, ಶೇಕಡಾ 5 ರ ಪ್ರೀಮಿಯಂ ನಲ್ಲಿ ವಿಮೋಚನೆಗೊಳಿಸುವುದು.

31) ಕರ್ನಾಟಕ ಕಂಪನಿ ನಿಯಮಿತರವರ ಕೆಳಗಿನ ಅಢಾವೆ ಪತ್ರಿಕೆಯಿಂದ ಸಾಮಾನ್ಯ ಗಾತ್ರದ ಅಢಾವೆ ಪತ್ರಿಕೆಯನ್ನು ತಯಾರಿಸಿ.

31-03-2022 ಹಾಗೂ 31-03-2023 ದಿನಾಂಕಗಳ ಅಢಾವೆ ಪತ್ರಿಕೆ.

ವಿವರಗಳು	31-03-2022 ₹	31-03-2023 ₹
I. ಇಕ್ವಿಟಿ ಮತ್ತು ಹೊಣೆಗಾರಿಕೆಗಳು:		
1. ಶೇರುದಾರರ ನಿಧಿಗಳು:		
ಶೇರು ಬಂಡವಾಳ	8,50,000	10,00,000
ಮೀಸಲು ಮತ್ತು ಉಳಿಕೆ ಲಾಭ	1,00,000	50,000
2. ಚಾಲ್ತಿಯೇತರ ಹೊಣೆಗಾರಿಕೆಗಳು:		
ದೀರ್ಘಾವಧಿಯ ಸಾಲಗಳು	4,50,000	5,75,000
3. ಚಾಲ್ತಿ ಹೊಣೆಗಾರಿಕೆಗಳು		
ವ್ಯಾಪಾರಿ ಕೊಡತಕ್ಕವುಗಳು	1,50,000	2,25,000
ಒಟ್ಟು	15,50,000	18,50,000
II. ಆಸ್ತಿಗಳು:		
1. ಚಾಲ್ತಿಯೇತರ ಆಸ್ತಿಗಳು: ಗೋಚರ ಆಸ್ತಿಗಳು	7,50,000	9,00,000
ಅಗೋಚರ ಆಸ್ತಿಗಳು	4,00,000	4,50,000
2. ಚಾಲ್ತಿ ಆಸ್ತಿಗಳು:		
ದಾಸ್ತಾನು	1,00,000	2,00,000
ಇತರೆ ಚಾಲ್ತಿ ಆಸ್ತಿಗಳು	3,00,000	3,00,000
ಒಟ್ಟು	15,50,000	18,50,000

32) ಈ ಕೆಳಗಿನ ಮಾಹಿತಿಗಳಿಂದ, ಕೆಳಕಂಡ ಅನುಪಾತಗಳನ್ನು ಕಂಡು ಹಿಡಿಯಿರಿ:

a) ದಾಸ್ತಾನು ಆವರ್ತನ ಅನುಪಾತ.

b) ವ್ಯಾಪಾರೀ ಬರತಕ್ಕವುಗಳ ಆವರ್ತನ ಅನುಪಾತ.

c) ವ್ಯಾಪಾರೀ ಕೊಡತಕ್ಕವುಗಳ ಆವರ್ತನ ಅನುಪಾತ.

d) ಸ್ಥೂಲ ಲಾಭ ಅನುಪಾತ.

e) ಕಾರ್ಯಾತ್ಮಕ ಅನುಪಾತ.

f) ನಿವ್ವಳ ಲಾಭ ಅನುಪಾತ.

ವಿವರಗಳು	₹
ಕಾರ್ಯಾಚರಣೆಗಳಿಂದ ಬಂದ ಆದಾಯ	10,00,000
ಸ್ಥೂಲ ಲಾಭ	2,00,000
ಸರಾಸರಿ ದಾಸ್ತಾನು	1,00,000
ನಿವ್ವಳ ಉದ್ದರಿ ಕಾರ್ಯಾಚರಣೆಗಳಿಂದ ಬಂದ ಆದಾಯ	6,00,000
ಸರಾಸರಿ ವ್ಯಾಪಾರೀ ಬರತಕ್ಕವುಗಳು	1,50,000
ನಿವ್ವಳ ಉದ್ದರಿ ಖರೀದಿ	5,00,000
ಸರಾಸರಿ ವ್ಯಾಪಾರೀ ಕೊಡತಕ್ಕವುಗಳು	2,50,000
ಕಾರ್ಯಾಚರಣೆ ವೆಚ್ಚಗಳು	1,00,000
ನಿವ್ವಳ ಲಾಭ	1,00,000

(English Version)

Instructions :

1. *The question paper contains* **four** *parts A, B, C and D. Part A consists of* **four** *sections I, II, III and IV.*
2. *Provide working notes wherever necessary.*
3. **15** *minutes extra has been alloted for candidates to read the questions.*
4. *Figures in the right hand margin indicate full marks.*
5. *For* **PART – A** *questions, only the first written answers will be considered for evaluation.*

PART – A

I. Choose the correct answer from the choices given: **(5 × 1 = 5)**

1) The agreement between the partners should be in

a) Oral b) Written

c) Oral / Written d) None of these

2) Asha, Usha and Disha are partners sharing profits in the ratio of 5:3:2. If Disha retires, the new profit sharing ratio between Asha and Usha will be ______

a) 3:2 b) 5:3

c) 5:2 d) 2:3

3) When shares can be forfeited?

a) Non-payment of calls money

b) Failure to attend meeting

c) Failure to repay the loan to the bank

d) The pledge of shares as a security

4) Fixed asset doesn't include:

a) Machinery

b) Buildings

c) Goodwill

d) Inventory

5) Increase or decrease of current assets are treated as a

a) Operating activities b) Investing activities

c) Financing activities d) Non-operating activities

II. Fill in the blanks by choosing the appropriate answers from those given in the bracket: **(5 × 1 = 5)**

(Realisation Account, Capital, Discount, Financial, Liquidity, Solvency)

6) At the time of admission of a new partner, the profit and loss account balance appearing in the old balance sheet (liabilities side) is credited to ______ account.

7) At the time of dissolution of partnership firm, partner loan is not recorded in ______.

8) Debentures cannot be redeemable at ______.

9) ______ statements are the basic and formal annual report.

10) ______ ratios are calculated to measure the short-term solvency of the business.

III. Match the following: **(5 × 1 = 5)**

11)

A	B
(a) Fluctuating capital system	(i) Legal representatives
(b) Executors	(ii) Comparative statement
(c) Realisation Expenses	(iii) Joint Stock Company
(d) Artificial Person	(iv) Dissolution of partnership firm
(e) Horizontal Analysis	(v) Change in capital account balance
	(vi) Common size statement

IV. Answer the following questions in one word or one sentence each: **(5 × 1 = 5)**

12) State any one reason for admitting a new partner.

13) Debentures can be converted into shares (State True or False)

14) Name any one user of financial statement Analysis.

15) Expand EPS.

16) Give the meaning of cash flows.

PART – B

V. Answer any three questions, each question carries two marks: (3 × 2 = 6)

17) What is partnership deed?

18) Pass journal entry to close revaluation account when there is profit at the time of retirement of a partner.

19) Name two methods of issue of shares.

20) State any two items that are shown under the head "shareholder's fund".

21) Write any two examples for investing activities.

PART – C

VI. Answer any three questions, each question carries six marks: (3 × 6 = 18)

22) Suraj, a partner in a firm, has withdrawn the following amounts during the year ended on 31-12-2023.

Rs. 6,000 on 31-03-2023

Rs. 10,000 on 01-07-2023

Rs. 4,000 on 31-10-2023

Rs. 1,000 on 31-12-2023

Calculate interest on drawings @ 6% per annum under product method.

23) Amar, Akbar and Antony are partners in a firm sharing profit and loss in the ratio of 4:3:2. Amar retires from the firm. Akbar and Antony agreed to share in the ratio of 5:3 in future.

Calculate gain ratio of Akbar and Antony.

24) Akash, Suresh and Ramesh are partners sharing profit and loss in the ratio of 3:2:1. Their capitals on 01-01-2023 stood at ₹ 45,000, ₹ 30,000 and ₹ 20,000 respectively. Suresh died on 30-09-2023, Partnership deed provides the following:

a) Interest on capital at 10% per annum.

b) Salary to Suresh ₹ 1,000 per month.

c) Suresh share of Goodwill (As per AS 26)

d) His share of profit upto the date of death on the basis of previous year's profit.

e) Total Goodwill of the firm ₹ 27,000.

f) Profit of the firm for the year 2022 is ₹ 15,000.

You are required to ascertain the amount payable to Suresh executors by preparing Executor's Account.

25) From the following information prepare statement of profit or loss for the year ended 31-03-2023 as per Schedule III of the Companies Act 2013.

Sl. No	Particulars	₹
1	Revenue from operations	5,00,000
2	Purchase of goods	3,00,000
3	Salaries to employees	40,000
4	Leave encashment	10,000
5	Rent and taxes	30,000
6	Repairs to machinery	20,000
7	Tax	30%

26) From the following information, calculate cash flow from financing activities:

Particulars	01-04-2022	31-03-2023
Debentures	8,00,000	10,00,000
Preference share capital	3,00,000	5,00,000

During the year, the company redeemed debentures of ₹ 1,00,000.

PART – D

VII. Answer any three questions, each question carries twelve marks: (3 × 12 = 36)

27) Saritha and Sangeetha are partners sharing profits and losses in the ratio of 3:2. Their balance sheet as on 31-03-2023 was as follows.

Balance Sheet as on 31-03-2023

LIABILITIES	₹	ASSETS	₹
Creditors	1,00,000	Cash	40,000
Bills payable	50,000	Stock	50,000
Reserve fund	50,000	Debtors	40,000
Capital Accounts:		Furniture	40,000
Saritha – 1,20,000		Machinery	80,000
Sangeetha – 80,000	2,00,000	Buildings	1,00,000
		Investments	40,000
		P & L Account	10,000
TOTAL	4,00,000	TOTAL	4,00,000

On 01-04-2023 Savitha admitted into Partnership on the following terms:

a) She brings in ₹ 60,000 as capital and ₹ 20,000 towards goodwill for ¼th share in future profits.

b) Goodwill amount is withdrawn by old partners. (As per AS 26).

c) Depreciate machinery and furniture by 10%.

d) Provision for doubtful debts is maintained at 5% on debtors.

e) Appreciate buildings by ₹ 22,000.

f) Provide ₹ 2,000 for outstanding salaries.

g) Investments are to be revalued at ₹ 50,000.

Prepare: 1) Revaluation A/C 2) Partner's capital A/C and 3) New balance sheet as on 1 – 4 – 2023.

28) Sachin and Rahul are partners sharing profits and losses in the ratio of 3:2. Their balance sheet as on 31-03-2023 is as follows:

Balance Sheet as on 31-03-2023

LIABILITIES	₹	ASSETS	₹
Creditors	10,000	Cash at bank	5,000
Bills payable	20,000	Investments	10,000
Sachin's loan	10,000	Bills receivable	10,000
Reserve fund	10,000	Debtors	25,000
Capital accounts:	–	Stock	10,000
Sachin – 30,000		Machinery	10,000
Rahul – 20,000	50,000	Furniture	10,000
		Buildings	20,000
	1,00,000		1,00,000

On the above date the firm was dissolved.

a) The assets were realised as follows: Bills receivable ₹ 7,500; Debtors and stock 10% less than the book value; Machinery realised 5% more than the book value; Buildings valued for ₹ 15,000.

b) Furniture and Investments were taken over by Sachin and Rahul at ₹ 5,000 each respectively.

c) Dissolution expenses were ₹ 1,000.

d) All liabilities were discharged in full.

Prepare:

i) Realisation A/C ii) Partner's Capital A/C iii) Bank A/C

29) Vijayalaxmi Sugar Co. Ltd, issued 10,000 Preference shares of ₹ 10 each at a Premium of ₹ 2 per share. The amount was payable as follows.

₹ 2 on application.

₹ 6 on allotment (including premium).

₹ 4 on first and final call.

All the shares were subscribed and the money duly received except the first and final call on 500 shares. The directors forfeited these shares and reissued them at fully paidup at ₹ 7 per share.

Pass the journal entries for issue, forfeiture and reissue of shares.

30) Give the journal entries for the issue of debentures for the following cases in the books of Reliance Co., Ltd.

a) Issue of ₹ 2,00,000, 9% debentures of ₹ 100 each at par and redeemable at par.

b) Issue of ₹ 2,00,000, 10% debentures of ₹ 100 each at a Premium of 5% but redeemable at par.

c) Issue of ₹ 2,00,000, 12% debentures of ₹ 100 each at a discount of 5%, redeemable at par.

d) Issue of ₹ 2,00,000, 8% debentures of ₹ 100 each at par but redeemable at a premium of 5%.

31) From the following balance sheet of Karnataka Company Ltd., prepare common size balance sheet as on 31-03-2022 and 31-03-2023.

Balance Sheet as on 31-03-2022 and 31-03-2023

Particulars	31-03-2022 ₹	31-03-2023 ₹
I. Equity and Liabilities:		
1. Shareholders fund:		
Share capital	8,50,000	10,00,000
Reserves and Surplus	1,00,000	50,000
2. Non-current liabilities:		
Long-term borrowings	4,50,000	5,75,000
3. Current liabilities:		
Short-term borrowings	1,50,000	2,25,000
Total	15,50,000	18,50,000
II. Assets:		
1. Non-Current Assets: Tangible Assets	7,50,000	9,00,000
Intangible Assets	4,00,000	4,50,000
2. Current Assets:		
Inventories	1,00,000	2,00,000
Other Current Assets	3,00,000	3,00,000
Total	15,50,000	18,50,000

32) From the following Particulars, Calculate undermentioned ratios:

a) Inventory turnover ratio.

b) Trade receivable turnover ratio.

c) Trade payable turnover ratio.

d) Gross profit ratio.

e) Operating ratio.

f) Net Profit ratio.

Particulars	₹
Revenue from operations	10,00,000
Gross profit	2,00,000
Average Inventory	1,00,000
Net credit revenue from operations	6,00,000
Average trade receivables	1,50,000
Net credit purchases	5,00,000
Average trade payable	2,50,000
Operating expenses	1,00,000
Net profit	1,00,000